...ಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
ಕ್ರಮ ಸಂ ......................
ದಿನಾಂಕ ......................
ಉ.ನಿ. | ಜ.ನಿ. | ಅ.ನಿ
ಶಾಖೆ: | ಶಾಖೆ | ಶಾಖೆ:

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**: ಕರ್ನಾಟಕ ರಾಜ್ಯದ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದ ವಿಶ್ವವಿದ್ಯಾಲಯ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಮಯದಲ್ಲಿ ಶುಲ್ಕಗಳನ್ನು ಪಡೆಯದಿರುವ ಬಗ್ಗೆ.

**ಓದಲಾಗಿದೆ**:
1. ಆಯುಕ್ತರ ಏಕ ಕಡತ ಪ್ರಸ್ತಾವನೆ ಸಂಖ್ಯೆ: SWD/EDU/ED3/98/2023 (Com: 1103692).
2. ಸರ್ಕಾರದ ಆದೇಶ ಸಂಖ್ಯೆ:SWD/EDU/ED3/91/2023 (C-1098854)ದಿನಾಂಕ:03-07-2023.

**<u>ಪ್ರಸ್ತಾವನೆ:</u>**

ಮೇಲೆ ಓದಲಾದ ಕ್ರಮಾಂಕ(1)ರ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆರವರ ಏಕಕಡತ ಪ್ರಸ್ತಾವನೆಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದ ವಿಶ್ವವಿದ್ಯಾಲಯ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಅನ್ವಯವಾಗುವಂತೆ, ಕುಟುಂಬದ ವಾರ್ಷಿಕ ಆದಾಯ ರೂ.2.50ಲಕ್ಷ ಒಳಗಿರುವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ ಅರ್ಹತೆ ಪಡೆದಿರುವ ಎಲ್ಲಾ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ದಾಖಲಾತಿ ಸಮಯದಲ್ಲಿ ಯಾವುದೇ ಕಡ್ಡಾಯ ಶುಲ್ಕಗಳನ್ನು ಪಾವತಿ ಮಾಡಿಸಿಕೊಳ್ಳದಂತೆ ವೈದ್ಯಕೀಯ ಶಿಕ್ಷಣ ಇಲಾಖೆಯ ಸಹಮತಿಯೊಂದಿಗೆ ಮಾರ್ಗಸೂಚಿಗಳನ್ನು ಹೊರಡಿಸುವಂತೆ ಏಕಕಡತದ ಪ್ರಸ್ತಾವನೆಯಲ್ಲಿ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (2)ರ ಸರ್ಕಾರದ ಆದೇಶ ದಿ:03-07-2023ರ ಆದೇಶದಲ್ಲಿ ಉನ್ನತ ಶಿಕ್ಷಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಮತಿಯ ಮೇರೆಗೆ 2023-24 ನೇ ಸಾಲಿನಿಂದ ಜಾರಿಗೆ ಬರುವಂತೆ ಕುಟುಂಬದ ವಾರ್ಷಿಕ ಆದಾಯ ರೂ. 2.50 ಲಕ್ಷ ಒಳಗಿರುವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ ಅರ್ಹತೆ ಪಡೆದಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ದಾಖಲಾತಿ ಸಮಯದಲ್ಲಿ ಸಲ್ಲಿಸಿರುವ ಮಾಹಿತಿಯಾನುಸಾರ Freeship Card ನಲ್ಲಿನ ದೃಢೀಕರಣದಂತೆ ಯಾವುದೇ ಕಡ್ಡಾಯ ಶುಲ್ಕಗಳನ್ನು (ಮರುಪಾವತಿ ಮಾಡಲಾಗುವ Deposit ಗಳನ್ನು ಹೊರತುಪಡಿಸಿ) ಪಾವತಿ ಮಾಡಿಸಿಕೊಳ್ಳದೇ ಉಚಿತವಾಗಿ ಪ್ರವೇಶ ಕಲ್ಪಿಸಲು ಆದೇಶಿಸಲಾಗಿದೆ.

ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ, 2023-24 ನೇ ಸಾಲಿನಿಂದ ಜಾರಿಗೆ ಬರುವಂತೆ ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷ ಒಳಗಿರುವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ ಅರ್ಹತೆ ಪಡೆದಿರುವ ಎಲ್ಲಾ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ದಾಖಲಾತಿ ಸಮಯದಲ್ಲಿ ಯಾವುದೇ ಕಡ್ಡಾಯ ಶುಲ್ಕಗಳನ್ನು (ಮರುಪಾವತಿ ಮಾಡಲಾಗುವ Deposit ಗಳನ್ನು ಹೊರತುಪಡಿಸಿ) ಪಾವತಿ ಮಾಡಿಸಿಕೊಳ್ಳದೇ ಉಚಿತವಾಗಿ ಪ್ರವೇಶ ಕಲ್ಪಿಸುವ ನಿಟ್ಟಿನಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಸಹಮತಿಯ ಮೇರೆಗೆ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಸಕಇ 198 ಪಕವಿ 2023,**

**ದಿನಾಂಕ: 06-02-2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಂತೆ ವೈದ್ಯಕೀಯ ಶಿಕ್ಷಣ ಇಲಾಖೆಯ ಸಹಮತಿಯ ಮೇರೆಗೆ ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಿಶ್ವವಿದ್ಯಾನಿಲಯ, ವಿದ್ಯಾಸಂಸ್ಥೆ, ಹಾಗೂ ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ, ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ ಅರ್ಹತೆ ಪಡೆದಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ Freeship Card ನಲ್ಲಿನ ದೃಢೀಕರಣದಂತೆ ಯಾವುದೇ ಕಡ್ಡಾಯ ಶುಲ್ಕಗಳನ್ನು (ಮರುಪಾವತಿ ಮಾಡಲಾಗುವ Deposit ಗಳನ್ನು ಹೊರತುಪಡಿಸಿ) ಪಾವತಿ ಮಾಡಿಸಿಕೊಳ್ಳದೇ ಉಚಿತವಾಗಿ ಪ್ರವೇಶ ಕಲ್ಪಿಸಲು ಈ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಆದೇಶಿಸಿದೆ.

1. ಕುಟುಂಬದ ವಾರ್ಷಿಕ ಆದಾಯ ಮಿತಿ ರೂ.2.50 ಲಕ್ಷದೊಳಗಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ಆಯಾ ಆಯಾ ವೈದ್ಯಕೀಯ ಕೋರ್ಸ್ ನ ಒಟ್ಟಾರೆ ಕೋರ್ಸ ಅವಧಿಯಲ್ಲಿ ಪ್ರತಿ ವರ್ಷ ಪ್ರವೇಶಾತಿ ಸಮಯದಲ್ಲಿ Universitty Fee ಹಾಗೂ ಮರುಪಾವತಿ ಮಾಡಲಾಗುವ Deposit ಗಳನ್ನು ಹೊರತುಪಡಿಸಿ, ವೈದ್ಯಕೀಯ ಶಿಕ್ಷಣ ಇಲಾಖೆ ನಿಗಧಿಪಡಿಸಿರುವ ಭೋಧನಾ ಶುಲ್ಕ ಸೇರಿದಂತೆ ಇತರೆ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸುವಂತೆ ಒತ್ತಾಯಮಾಡತಕ್ಕದ್ದಲ್ಲ.

2. ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಮಂಜೂರಾಗುವ ಶುಲ್ಕದ ಮೊತ್ತವನ್ನು ವಿದ್ಯಾರ್ಥಿಯು ಇತರೆ ಯಾವುದೇ ವಿಷಯಗಳಿಗೆ ಖರ್ಚು ಭರಿಸದೇ, ಕಡ್ಡಾಯವಾಗಿ ಕಾಲೇಜಿಗೆ ಪಾವತಿ ಮಾಡಬೇಕಾಗಿರುತ್ತದೆ (ನಿರ್ವಹಣಾ ವೆಚ್ಚ ಹೊರತುಪಡಿಸಿ). ಸಮಾಜ ಕಲ್ಯಾಣ ಇಲಾಖೆಯು DBT ಮೂಲಕ ವಿದ್ಯಾರ್ಥಿಗಳಿಗೆ ಪಾವತಿಸಿದ ಬಗ್ಗೆ ಮಾಹಿತಿಯನ್ನು ಖಚಿತ ಪಡಿಸಿಕೊಂಡು ನಂತರ ವಿದ್ಯಾರ್ಥಿಯಿಂದ ವೈದ್ಯಕೀಯ ಶಿಕ್ಷಣ

ಇಲಾಖೆ ನಿಗಧಿಪಡಿಸಿದ ಭೋಧನಾ ವೆಚ್ಚದ ಮೊತ್ತವನ್ನು ವಿದ್ಯಾರ್ಥಿಯಿಂದ ಪಾವತಿ ಮಾಡಿಸಿಕೊಳ್ಳುವುದು.

3. ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿ ಹಾಗೂ ಉನ್ನತ ಶಿಕ್ಷಣದಲ್ಲಿ ವಂಚಿತರಾಗಬಾರದೆಂಬ ಉದ್ದೇಶದಿಂದ ವಿದ್ಯಾರ್ಥಿಯ ವೈದ್ಯಕೀಯ ವಿದ್ಯಾಭ್ಯಾಸದ ಅವಧಿಯ ಎಲ್ಲಾ ಶೈಕ್ಷಣಿಕ ವರ್ಷದಲ್ಲಿ ಆಯಾ ಶೈಕಣಿಕ ವರ್ಷಕ್ಕೆ ಪ್ರವೇಶಾತಿ ಸಮಯದ ಆರಂಭದಲ್ಲಿಯೇ ವೈದ್ಯಕೀಯ ಶಿಕ್ಷಣ ಇಲಾಖೆ ನಿಗಧಿಪಡಿಸಿದ ಭೋಧನಾ ಶುಲ್ಕವನ್ನು ಪಾವತಿಸುವಂತೆ ಒತ್ತಾಯ ಮಾಡುವಂತಿಲ್ಲ.

4. ವಿದ್ಯಾರ್ಥಿಯು ಆಯಾಯ ಕೋರ್ಸಿಗೆ ದಾಖಲಾದ ದಿನದಂದೇ ವಿದ್ಯಾರ್ಥಿಗೆ University Reg Number ಅನ್ನು ನೀಡುವುದು ಹಾಗೂ ಸದರಿ ಮಾಹಿತಿಯನ್ನು ಎಸ್ ಎಸ್ ಪಿ ರವರಿಗೆ ರವಾನಿಸಿ ವಿದ್ಯಾರ್ಥಿಯು ಕಾಲೇಜಿಗೆ ದಾಖಲಾದ ದಿನದಂದೇ ವಿದ್ಯಾರ್ಥಿಯು ವಿದ್ಯಾರ್ಥಿವೇತನಕ್ಕೆ(ಶುಲ್ಕ ಮರುಪಾವತಿ) ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡುವುದು.

5. ಅದೇ ರೀತಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ದಾಖಲಾಗುತ್ತಿರುವ ವಿದ್ಯಾರ್ಥಿಗಳಿಗೂ ಸಹ ದಾಖಲಾದ ದಿನದಂದೇ ವಿದ್ಯಾರ್ಥಿವೇತನಕ್ಕೆ(ಶುಲ್ಕ ಮರುಪಾವತಿ) ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡುವುದು.

6. ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶ್ವವಿದ್ಯಾಲಯಗಳ ಸಂಬಂದ E Attestation ಮೂಲಕ ದಾಖಲಾತಿ ದಿನದಂದೇ ವಿದ್ಯಾರ್ಥಿವೇತನಕ್ಕೆ (ಶುಲ್ಕ ಮರುಪಾವತಿ) ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡುವುದು.

7. ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ(ಶುಲ್ಕ ಮರುಪಾವತಿ) ಮಾರ್ಗಸೂಚಿಯಲ್ಲಿ ಉಲ್ಲೇಖಿಸಿರುವಂತೆ, Freeship Card ಅನ್ನು ಮಾನ್ಯ ಮಾಡುವುದು ಎಲ್ಲ ಕಾಲೇಜುಗಳ ಜವಾಬ್ದಾರಿಯಾಗಿರುತ್ತದೆ. Freeship Card ನಲ್ಲಿ ವಿದ್ಯಾರ್ಥಿಯು ಸಲ್ಲಿಸಿರುವ ದೃಡೀಕರಣದಂತೆ ವಿದ್ಯಾರ್ಥಿಗೆ ವಿದ್ಯಾರ್ಥಿವೇತನ (ಶುಲ್ಕ ಮರುಪಾವತಿ) ಮೊತ್ತ ಪಾವತಿಯಾದ ನಂತರದಲ್ಲಿ ವಿದ್ಯಾರ್ಥಿಯಿಂದ ಕಡ್ಡಾಯವಾಗಿ ಭರಿಸಿಕೊಳ್ಳುವುದು. ಒಂದು ವೇಳೆ ವಿದ್ಯಾರ್ಥಿಯು ತನ್ನ ಖಾತೆಗೆ ವಿದ್ಯಾರ್ಥಿವೇತನ(ಶುಲ್ಕ ಮರುಪಾವತಿ)ಮೊತ್ತ ಜಮೆಯಾದ ನಂತರದಲ್ಲೂ ಕಾಲೇಜಿಗೆ ಶುಲ್ಕವನ್ನು ಮರುಪಾವತಿ ಮಾಡದೇ ಇದ್ದಲ್ಲಿ, ಸಂಬಂಧಪಟ್ಟ ಕಾಲೇಜುಗಳು/ ಶಿಕ್ಷಣ ಸಂಸ್ಥೆಗಳು ಅಂತಹ ವಿದ್ಯಾರ್ಥಿಗೆ ವಿದ್ಯಾರ್ಥಿವೇತನ ಜಮೆ ಆಗಿರುವ ಬಗ್ಗೆ ದೃಡೀಕರಿಸಿಕೊಂಡು

ಬೋಧನಾ ಶುಲ್ಕ ಪಾವತಿ ಮಾಡದೇ ಇರುವ ವಿದ್ಯಾರ್ಥಿಯ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವುದು.

8. SSP ತಂತ್ರಾಂಶವನ್ನು ನಿರ್ವಹಣೆ ಮಾಡುತ್ತಿರುವ ಕಾರ್ಯಕ್ರಮ ನಿರ್ದೇಶಕರು, SSP ರವರೂ ಸದರಿ ಎಲ್ಲಾ ಮೆಟ್ರಿಕ್ ನಂತರದ ಕೋರ್ಸುಗಳ ಸಂಬಂಧ ಯಾವುದೇ ರೀತಿಯ Bonafide Data ಗೆ ನಿರೀಕ್ಷಿಸದೇ ಹಾಗೂ ವಿದ್ಯಾರ್ಥಿಗಳಿಗೆ University Register Number ಒತ್ತಾಯ ಮಾಡದೇ ಕಡ್ಡಾಯವಾಗಿ ವಿದ್ಯಾರ್ಥಿವೇತನಕ್ಕೆ(ಶುಲ್ಕ ಮರುಪಾವತಿ) ಅರ್ಜಿಯನ್ನು ದಾಖಲಾದ ದಿನದಂದೇ ಪಡೆದು, ಅದೇ ದಿನ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗೆ ಅವಕಾಶ ಮಾಡಿಕೊಡುವುದು ಹಾಗೂ ವಿದ್ಯಾರ್ಥಿ ಅರ್ಜಿ ಸಲ್ಲಿಸಿದ ದಿನದಂದೇ ಸಂಬಂಧಪಟ್ಟ ಇಲಾಖೆಗೆ ವಿದ್ಯಾರ್ಥಿವೇತನ (ಶುಲ್ಕ ಮರುಪಾವತಿ) ಮಂಜೂರು ಮಾಡಲು ಅವಕಾಶ ಮಾಡಿಕೊಡುವುದು. ಯಾವುದೇ ವಿಳಂಬಕ್ಕೆ ಹಾಗೂ ತಾಂತ್ರಿಕ ದೋಷಗಳಿಗೆ ಆಸ್ಪದ ನೀಡುವಂತಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಎಲ್.ನರಸಿಂಹಮೂರ್ತಿ)**
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

6/2/2014

**ಇವರಿಗೆ,**

1) ಮಹಾಲೇಖಪಾಲರು ಲೆಕ್ಕ ಪತ್ರ: ಲೆಕ್ಕಪರಿಶೋಧನೆ) ಪಾರ್ಕ್ ರಸ್ತೆ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು.
5) ಕುಲಸಚಿವರು, ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ, ಜಯನಗರ, ಬೆಂಗಳೂರು.
6) ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು (ವೈದ್ಯಕೀಯ ಶಿಕ್ಷಣ ಇಲಾಖೆಯ ಮುಖಾಂತರ).
7) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

8) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು.
9) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಇ ಆಡಳಿತ ಕೇಂದ್ರ, ಸಿಆಸು ಇಲಾಖೆ (ಇ-ಆಡಳಿತ), ಬೆಂಗಳೂರು.
10) ಕಾರ್ಯಕ್ರಮ ನಿರ್ದೇಶಕರು, SSP, ಬೆಂಗಳೂರು.
11) ಎಲ್ಲಾ ಜಿಲ್ಲೆಗಳ ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ(ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಮುಖಾಂತರ)
12) ಕಲ್ಯಾಣ ಕೇಂದ್ರ, 24/7 helpdesk, ಸಮಾಜ ಕಲ್ಯಾಣ ಇಲಾಖೆ, ಯವನಿಕ ಆವರಣ, ನೃಪತುಂಗ ರಸ್ತೆ, ಡಾ|| ಬಿ.ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು.
13) ಶಾಖಾ ರಕ್ಷಾ, ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ :**

1. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ.

*****